Dt.07.10.2024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಳಲ್ಕೆರೆ.

ಸಿ ಸಿ ನಂಃ 450/2024

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : ಚಂದ್ರಶೇಖರ್ | | ಪಿ.ಡಬ್ಲ್ಯೂ | : 1 |
| ತಂದೆಯ ಹೆಸರು | : ಉಮಾಪತಿ | | ಸಿ.ಡಬ್ಲ್ಯೂ | : 1 |
| ವಯಸ್ಸು | : 57 ವರ್ಷ | | ದಿನಾಂಕ | : 07.10.2024 |
| ಉದ್ಯೋಗ | : ವ್ಯವಸಾಯ | | | |
| ವಾಸಸ್ಥಳ | : ನಾಗೇನಹಳ್ಳಿ ಗ್ರಾಮ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

**1** ನೇ ಆರೋಪಿ ಈಗ ಮೃತಪಟ್ಟಿರುತ್ತಾರೆ. ನ್ಯಾಯಲಯದ ಮುಂದೆ ಇರುವ **2** ನೇ ಆರೋಪಿ ಗೊತ್ತು. ಚಾಸಾ–**2** ಮತ್ತು **3** ಗೊತ್ತು ಅವರು ನಮ್ಮ ಊರಿನವರು. ನಂಜುಂಡಪ್ಪ ತಂದೆ ನಾಗೇಂದ್ರಪ್ಪ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ.

ಈಗ್ಗೆ **1** ವರ್ಷಗಳ ಹಿಂದೆ ನಾನು ಮತ್ತು ಸದರಿ ನಂಜುಂಡಪ್ಪ ರವರು ನಮ್ಮ ಊರಿನಿಂದ ಹಳೇರಂಗಾಪುರಕ್ಕೆ ಬೈಕಿನಲ್ಲಿ ಸದರಿ ನಂಜುಂಡಪ್ಪರವರ ಬಾಬ್ತು ಬೈಕಿನಲ್ಲಿ ಹೋಗಿ ನಮ್ಮ ಸಂಬಂಧಿಕರ ಸಮಾರಾಧನೆಯ ಕಾರ್ಯಕ್ರಮವನ್ನು ಮುಗಿಸಿಕೊಂಡು ಅದೇ ದಿನ ಸಂಜೆ **05.00** ಗಂಟೆಗೆ ವಾಪಸ್ಸು ಬರುವಾಗ ಸದರಿ ಬೈಕನ್ನು ಸದರಿ ನಂಜುಂಡಪ್ಪ ಚಾಲನೆ ಮಾಡುತ್ತಿದ್ದರು ನಾನು ಸದರಿ ಬೈಕಿನ ಹಿಂಬದಿಯಲ್ಲಿ ಕುಳಿತಿದ್ದೇನು. ಸದರಿ ಬೈಕ್ ಮತ್ತು ಲಾರಿಯ ನಡುವೆ ಮುತ್ತುಗದೂರು ಗ್ರಾಮದ ಬಳಿ ಅಪಘಾತವಾಗಿರುತ್ತದೆ. ಸದರಿ ಅಪಘಾತದಲ್ಲಿ **1** ನೇ ಆರೋಪಿಗೆ ತಲೆಗೆ ಗಾಯಗಳು ಆಗಿರುತ್ತವೆ. ಸದರಿ ಅಪಘಾತದಲ್ಲಿ ನನ್ನ ತಲೆಗೆ, ಬೆನ್ನಿಗೆ ಮತ್ತು ಬಲಗೈಗೆ ಮತ್ತು ಮೈಕೈಗೆ ಗಾಯಗಳಾಗಿರುತ್ತವೆ. ಆನಂತರ ನನ್ನನ್ನು ಸಾಸಲುಹಳ್ಳದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಸದರಿ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಪಡೆದು ನಂತರ ಅಲ್ಲಿಂದ ದಾವಣಗೆರೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ

Dt.07.10.2024

ದಾಖಲಾಗಿರುತ್ತೇನೆ.

ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಹೆಬ್ಬೆಟ್ಟಿನ ಗುರುತನ್ನು ನಿಪಿ–**1** ಎಂದು ಗುರುತಿಸಲಾಯಿತು. ಸದರಿ ನಿಪಿ–**1** ಕ್ಕೆ ದಾವಣಗೆರೆಯಲ್ಲಿ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ.

ಸದರಿ ಅಪಘಾತ **1** ನೇ ಆರೋಪಿಯ ತಪ್ಪಿನಿಂದ ಆಗಿರುತ್ತದೆ.

ಈ ಹಂತದಲ್ಲಿ ಸಾಕ್ಷಿಗೆ ಇನ್ನೊಂದು ತೋರಿಸಿದ್ದು, ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಹೆಬ್ಬೆಟ್ಟಿನ ಗುರುತನ್ನು ನಿಪಿ–**2** ಎಂದು ಗುರುತಿಸಲಾಯಿತು. ಸದರಿ ನಿಪಿ–**2** ಕ್ಕೆ ದಾವಣಗೆರೆಯಲ್ಲಿ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ.

ಸಾಕ್ಷಿಗೆ ಈ ಹಂತದಲ್ಲಿ ಒಂದು ಫೋಟೋವನ್ನು ತೋರಿಸಿದ್ದು, ಸದರಿ ಫೊಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಫೋಟೋವನ್ನು ನಿಪಿ–**3** ಎಂದು ಗುರುತಿಸಲಾಯಿತು.

ಅಪಘಾತದ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ. ನಾನು ತೋರಿಸಿದ ಸ್ಥಳದಲ್ಲಿ ಚಾಸಾ–**2** ಮತ್ತು ಚಾಸಾ–**3** ರವರ ಸಮಕ್ಷಮ ಮಹಜರ್ ಮಾಡಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿಗೆ ಇನ್ನೊಂದು ತೋರಿಸಿದ್ದು, ಸದರಿ ದಾಖಲೆಯು ವಾಹನ ಪರಿಶೀಲನಾ ಪಂಚನಾಮೆಯಾಗಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಹೆಬ್ಬೆಟ್ಟಿನ ಗುರುತನ್ನು ನಿಪಿ–**4** ಎಂದು ಗುರುತಿಸಲಾಯಿತು.

ಆ ದಿನ **1** ನೇ ಆರೋಪಿ ಚಲಾಯಿಸುತ್ತಿದ್ದ ಬೈಕನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ಅಪಘಾತ ಪಡಿಸಿದ ಟಿಪ್ಪರ್ ಲಾರಿಯನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಗೆ ಈ ಹಂತದಲ್ಲಿ ನಾಲ್ಕು ಫೋಟೋಗಳನ್ನು ತೋರಿಸಿದ್ದು, ಸದರಿ ಫೊಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಫೋಟೋಗಳನ್ನು ಕ್ರಮವಾಗಿ ನಿಪಿ–**5** ರಿಂದ ನಿಪಿ–**8** ಎಂದು ಗುರುತಿಸಲಾಯಿತು.

ನಾನು ಈ ಪ್ರಕರಣಕ್ಕೆ ಸಂಬ ಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಮರು ಹೇಳಿಕೆ ನೀಡಿಲ್ಲ.

Dt.07.10.2024

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ</u>

ದಿಃ04.11.2023 ರಂದು ಸಂಜೆ 05.00 ಗಂಟೆ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ಕಾಗಳಗೆರೆ ಗ್ರಾಮದ ಸಮೀಪದಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿ. ಆ ದಿನ 1 ನೇ ಆರೋಪಿ ತನ್ನ ಬಾಬ್ತು ಮೋಟಾರ್ ಸೈಕಲ್ ನಂ.ಕೆಎ–17–ಹೆಡ್ ಡಿ–0206 ವಾಹನವನ್ನು ಚಲಾಯಿಸುತ್ತಿದ್ದರು ಎಂದರೆ ಸರಿ. ಸದರಿ ಮೋಟಾರ್ ಸೈಕಲ್ ನಲ್ಲಿ ಹಿಂಬದಿಯಲ್ಲಿ ಕುಳಿತಿದ್ದೇನು ಎಂದರೆ ಸರಿ. ಆ ದಿನ ಟಿಪ್ಪರ್ ಲಾರಿ ನಂ.ಕೆಎ–16–ಎ–2878 ನ್ನು ರಸ್ತೆಯ ಮಧ್ಯದಲ್ಲಿ ಯಾವುದೇ ಮುನ್ಸೂಚನೆ ನೀಡದೇ ಪಾರ್ಕಿಂಗ್ ಲೈಟ್ ಹಾಕದೇ ರಸ್ತೆಯ ಸುಗಮ ಸಂಚಾರಕ್ಕೆ ಅಡ್ಡಿಪಡಿಸುವಂತೆ ನಿಲ್ಲಿಸಿದ್ದರು ಎಂದರೆ ಸರಿ. ಆ ದಿನ ನನ್ನನ್ನು ಮತ್ತು 1 ನೇ ಆರೋಪಿಯನ್ನು ಚಾಸಾ–9 ರವರು ಸಾಸಲು ಹಳ್ಳದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಪ್ರಥಮ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿ. ನಂತರ ಚಾಸಾ–10 ಮತ್ತು ಹೇಮಂತ್ ಕುಮಾರ್ ರವರು ನನ್ನನ್ನು ದಾವಣಗೆರೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುತ್ತಾರೆ ಎಂದರೆ ಸರಿ. ದಿಃ05.11.2023 ರಂದು ನಾನು ಚಿಕ್ಕಜಾಜೂರು ಪೊಲೀಸ್ ಠಾಣೆಯಲ್ಲಿ ನಿಪಿ–1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿ. ನಂತರ ನನ್ನನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಿರುತ್ತಾರೆ ಎಂದರೆ ಸರಿ.

ದಿಃ06.11.2023 ರಂದು ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಪೊಲೀಸರು ಅಪಘಾತ ಸ್ಥಳಕ್ಕೆ ಬಂದಾಗ ಅಪಘಾತದ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸುತ್ತೇನೆ. ನಾನು ತೋರಿಸಿದ ಸ್ಥಳದಲ್ಲಿ ಚಾಸಾ–2 ಮತ್ತು ಚಾಸಾ–3 ರವರ ಸಮಕ್ಷಮ ಅದೇ ದಿನ ಮಧ್ಯಾಹ್ನ 12.30 ರಿಂದ 01.30 ರವರೆಗೆ ನಿಪಿ–2 ರಂತೆ ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯ ಕಾಲದಲ್ಲಿ ನಿಪಿ–3 ರಂತೆ ಪೋಟೋವನ್ನು ತೆಗೆದಿರುತ್ತಾರೆ ಎಂದರೆ ಸರಿ.

ದಿಃ06.11.2023 ರಂದು ನನ್ನನ್ನು ಚಿಕ್ಕಜಾಜೂರು ಪೊಲೀಸ್ ಠಾಣಾ ಆವರಣಕ್ಕೆ

Dt.07.10.2024

ಪೊಲೀಸರು ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಸದರಿ ಚಿಕ್ಕಜಾಜೂರು ಪೊಲೀಸ್ ಠಾಣಾ ಆವರಣದಲ್ಲಿ ನಿಲ್ಲಿಸಿದ್ದ ಅಪಘಾತ ಪಡಿಸಿದ ಟಿಪ್ಪರ್ ಲಾರಿ ನಂ.ಕೆಎ–16–ಎ–2878 ಮತ್ತು ಮೋಟಾರ್ ಸೈಕಲ್ ನಂ.ಕೆಎ–17–ಹೆಚ್.ಡಿ.0206 ವಾಹನವನ್ನು ನನಗೆ ತೋರಿಸಿರುತ್ತಾರೆ ಎಂದರೆ ಸರಿ. ಸದರಿ ವಾಹನಗಳನ್ನು ನಾನು ಚಿಕ್ಕಜಾಜೂರು ಪೊಲೀಸ್ ಠಾಣಾ ಆವರಣದಲ್ಲಿ ನಾನು ಗುರುತಿಸಿರುತ್ತೇನೆ ಎಂದರೆ ಸರಿ. ಸದರಿ ವಾಹನಗಳನ್ನು ನಾನು ಚಾಸಾ–2 ಮತ್ತು ಚಾಸಾ–3 ರವರ ಸಮಕ್ಷಮ ಗುರುತಿಸಿದ ಮೇರೆಗೆ ಅದೇ ದಿನ ಮಧ್ಯಾಹ್ನ 03.00 ರಿಂದ 04.00 ರವರೆಗೆ ನಿಪಿ–4 ರಂತೆ ವಾಹನ ಪರಿಶೀಲನಾ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯ ಕಾಲದಲ್ಲಿ ಸದರಿ ಮೋಟಾರ್ ಸೈಕಲ್ ಮತ್ತು ಟಿಪ್ಪರ್ ಲಾರಿಯ ಪೋಟೋಗಳನ್ನು ನಿಪಿ–5 ರಿಂದ ನಿಪಿ–8 ರಂತೆ ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿ.

ದಿ:09.11.2023 ರಂದು ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿ. ಅಲ್ಲಿ ಸದರಿ ಅಪಘಾತ ಪಡಿಸಿದ 1 ನೇ ಆರೋಪಿ ದಿ:08.11.2023 ರಂದು ಬೆಳಿಗ್ಗೆ 05.30 ಗಂಟೆ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಅಪಘಾತವು 1 ನೇ ಆರೋಪಿತನು ಸ್ವತಃ ತನ್ನ ಬಾಬ್ತು ಕೆಎ–17–ಹೆಚ್.ಡಿ.–0206 ಬೈಕಿನ ಹಿಂಬದಿಯಲ್ಲಿ ನನ್ನನ್ನು ಕೂರಿಸಿಕೊಂಡು ತನ್ನ ಬೈಕನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಕೆಎ–16–ಎ–2878 ನೇ ನಂಬರಿನ ಟಿಪ್ಪರ್ ಲಾರಿಯ ಚಾಲಕನು ರಸ್ತೆಯ ಯಾವುದೇ ಮೂನ್ಸೂಚನೆ ನೀಡಿದ ಪಾರ್ಕಿಂಗ್ ಲೈಟ್ ಹಾಕದೇ ರಸ್ತೆಯ ಸುಗಮ ಸಂಚಾರಕ್ಕೆ ಅಡ್ಡಿಯಾಗುವಂತೆ ನಿಲ್ಲಿಸಿದ್ದ ಲಾರಿಯ ಹಿಂಭಾಗಕ್ಕೆ ಡಿಕ್ಕಿ ಪಡಿಸಿದ್ದರಿಂದ ಸದರಿ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿ. ಸದರಿ ಟಿಪ್ಪರ್ ಲಾರಿಯ ಚಾಲಕ ನ್ಯಾಯಾಲಯದ ಮುಂದೆ ಇರುವ ಆರೋಪಿ ಆಗಿರುತ್ತಾನೆ ಎಂದರೆ ಸರಿ. ಆ ಬಗ್ಗೆ ದಿ:09.11.2023 ರಂದು ಈ ಮೇಲೆ ಹೇಳಿದಂತೆ ನಿಪಿ–9 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಅಪಘಾತದಿಂದ ನನಗೆ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ, ಕಿವಿ ಸರಿಯಾಗಿ ಕೇಳಿಸುವುದಿಲ್ಲ.

<u>ಪಾಟೀ ಸವಾಲು: **2** ನೇ ಆರೋಪಿ ಪರ ವಕೀಲರಿಂದ</u>

ನನಗೆ ಓದಲು ಬರೆಯಲು ಬರುವುದಿಲ್ಲ. ನಿಪಿ–1 ನ್ನು ಯಾರು ಮತ್ತು ಎಷ್ಟು ಗಂಟೆಗೆ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ–1 ರಲ್ಲಿ ಏನೇನೂ ವಿಷಯಗಳನ್ನು ಬರೆದಿರುತ್ತಾರೆ

Dt.07.10.2024

ಎಂದು ನನಗೆ ಗೊತ್ತಿಲ್ಲ. ನಿಪಿ–2 ನ್ನು ಯಾವ ದಿನ ಎಲ್ಲಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.ಪೊಲೀಸರ ಕೋರಿಕೆಯ ಮೇರೆಗೆ ನಿಪಿ–2 ಕ್ಕೆ ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ ಎಂದರೆ ಸರಿ. ನಿಪಿ–2 ರಲ್ಲಿ ಏನೇನೂ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ–3 ಪೋಟೋದಲ್ಲಿ ಇರುವ ಜಮೀನುಗಳು ಯಾರಿಗೆ ಸೇರಿರುತ್ತವೆ ಎಂದು ನನಗೆ ಗೊತ್ತಿಲ್ಲ. ನಿಪಿ–3 ಪೋಟೋವನ್ನು ಯಾರು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನಾನಾಗಲೀ, 1 ನೇ ಆರೋಪಿಯಾಗಲೀ ಆ ದಿನ ಸದರಿ ಬೈಕಿನಲ್ಲಿ ಹೋಗುವಾಗ ಹೆಲ್ಮೆಟ್ ಅನ್ನು ಧರಿಸಿರಲಿಲ್ಲ.

ನಾನು ಮತ್ತು 1 ನೇ ಆರೋಪಿ ಆ ದಿನ 12.00 ಗಂಟೆಗೆ ನಮ್ಮ ಊರನ್ನು ಬಿಟ್ಟಿರುತ್ತೇವೆ. ಆ ದಿನ ನಾನು ಮತ್ತು 1 ನೇಆ ೀರೋಪಿ ಸಾಸಲು ಹಳ್ಳದ ಮಾರ್ಗವಾಗಿ ಬೈಕಿನಲ್ಲಿ ಬಂದಿರುತ್ತೇವೆ. ಆ ದಿನ 1ನೇ ಆರೋಪಿ ಅತೀವೇಗ ಮತ್ತು ಅಜಾಗರೂಕತೆಯಿಂದ ಸದರಿ ಬೈಕನ್ನು ಚಾಲನೆ ಮಾಡುತ್ತಿದ್ದರು. ನಿಪಿ–3 ಪೋಟೋದಲ್ಲಿ ತೋರಿಸಿರುವ ರಸ್ತೆಯಲ್ಲಿ ಸಾಕಷ್ಟು ಲಾರಿಗಳು ಮತ್ತು ಟಿಪ್ಪರ್ ಗಳು ನಿಂತಿರುತ್ತವೆ ಎಂದರೆ ಸರಿ. ಆ ದಿನ ನಿಪಿ–3 ಪೋಟೋದಲ್ಲಿ ತೋರಿಸಿದ ರಸ್ತೆಯಲ್ಲಿ ಆರೋಪಿಯ ಟಿಪ್ಪರ್ ಲಾರಿಯನ್ನು ಹೊರತುಪಡಿಸಿ ಬೇರೆ ಯಾವುದೇ ಲಾರಿಗಳು ಇರಲಿಲ್ಲ. ಪಾರ್ಕಿಂಗ್ ಲೈಟ್ ಬಗ್ಗೆ ನನಗೆ ತಿಳಿದಿರುತ್ತದೆ. ಆ ದಿನ ಯಾವ ಯಾವ ವಾಹನಗಳಲ್ಲಿ ಪಾರ್ಕಿಂಗ್ ಲೈಟ್ ಅನ್ನು ಹಾಕಿರುತ್ತಾರೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ.

ಸಾಮಾನ್ಯವಾಗಿ ಯಾವುದೇ ವಾಹನ ಚಾಲಕರು ಊಟ ಮಾಡಲು ಮತ್ತು ಟೀ ಕುಡಿಯಲು ಹೋಗುವಾಗ ರಸ್ತೆಯ ಎಡಬದಿಯಲ್ಲಿ ವಾಹನಗಳನ್ನು ನಿಲ್ಲಿಸಿ ಹೋಗುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ವಾಹನ ಚಾಲಕರು ಊಟ ಮಾಡಲು ಮತ್ತು ಟೀ ಕುಡಿಯಲು ಹೋಗುವಾಗ ರಸ್ತೆಯ ಬದಿಯಲ್ಲಿ ತಮ್ಮ ವಾಹನವನ್ನು ನಿಲ್ಲಿಸಿ ಕಾನೂನು ಪ್ರಕಾರ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ನನಗೆ ದೂರದಲ್ಲಿ ಏನು ಇರುತ್ತದೆ ಎಂದು ಕಾಣಿಸುವುದಿಲ್ಲ ಎಂದರೆ ಸರಿ. ನನಗೆ ಕಣ್ಣಿನ ದೃಷ್ಟಿ ಇರುವುದರಿಂದ ದೂರದಲ್ಲಿ ಸಂಜೆ ಸಮಯದಲ್ಲಿ ಲೈಟ್ ಹಾಕಿದರೆ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕಣ್ಣಿನ ದೃಷ್ಟಿ ಇರುವುದರಿಂದ ದೂರದಲ್ಲಿ ಬೆಳಗಿನ ಸಮಯದಲ್ಲಿ ಲೈಟ್ ಹಾಕಿದರೆ ಕಾಣಿಸುವುದಿಲ್ಲ ಎಂದರೆ ಸರಿ.

Dt.07.10.2024

ಆ ದಿನ ಆರೋಪಿ ಕಾಗಳಗೆರೆ ರಸ್ತೆಯಲ್ಲಿ ತನ್ನ ಟಿಪ್ಪರ್ ಲಾರಿಯನ್ನು ನಿಲ್ಲಿಸಿದ್ದನು. ಆ ದಿನ ಆರೋಪಿ ಕಾಗಳಗೆರೆ ಗ್ರಾಮದ 2 ಕೀ.ಮೀಟರ್ ದೂರದ ರಸ್ತೆಯಲ್ಲಿ ತನ್ನ ಟಿಪ್ಪರ್ ಲಾರಿಯನ್ನು ನಿಲ್ಲಿಸಿದ್ದನು . ಆರೋಪಿಆ ದಿನ ಸುಮಾರು 2 ಕೀ.ಮೀಟರ್ ದೂರದಲ್ಲಿ ತನ್ನ ಟ ಟಿಪ್ಪರ್ ಲಾರಿಯನ್ನು ನಿಲ್ಲಿಸಿದ್ದರಿಂದ ಆ ದಿನ ಆರೋಪಿ ತನ್ನ ಟಪ್ಪರ್ ಲಾರಿಗೆ ಪಾರ್ಕಿಂಗ್ ಲೈಟ್ ಹಾಕಿದ್ದನೋ ಇಲ್ಲವೆಂದು ಹೇಳಲಾಗುವುದಿಲ್ಲ ಎಂದರೆ ಸರಿ. ಸದರಿ ಅಪಘಾತದಿಂದ ನನಗೆ ಕಿವಿ ಸರಿಯಗಿ ಕೇಳುಸುತ್ತಿಲ್ಲವೆಂದು ಮತ್ತು ನನ್ನ ಕಣ್ಣು ಸರಿಯಾಗಿ ಕಾಣಿಸುತ್ತಿಲ್ಲವೆಂದು ನನ್ನ ಗಾಯದಪ್ರಮಾಣಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

ನಾನು ಅಪಘಾತದ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ 1ನೇ ಆರೋಪಿಯ ಬೈಕಿನಲ್ಲಿ ಹೋಗುತ್ತಿದ್ದು ಸದರಿ ಬೈಕಿಗೆ ಸಂಬಂಧಿಸಿದಂತೆ ವಿಮಾ ಪಾಲಿಸಿ ಇರಲಿಲ್ಲ ಎಂದರೆ ಸರಿ. ಸದರಿ ಬೈಕನ್ನು ಚಲಾಯಿಸಲು 1 ನೇ ಆರೋಪಿಗೆ ಯಾವುದೇ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿ. ಸದರಿ ಬೈಕಿಗೆ ವಿಮಾ ಪಾಲಿಸಿ ಇಲ್ಲದ ಕಾರಣ 2 ನೇ ಆರೋಪಿಯಿಂದ ಅಪಘಾತದ ಪರಿಹಾರ ಪಡೆಯುವ ಸಲುವಾಗಿ ನಿಪಿ–1 ರಂತೆ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಆರೋಪಿತನಿಗೆ ಸದರಿ ಬೈಕನ್ನು ಚಲಾಯಿಸಲು ಚಾಲನಾ ಪರವಾನಿಗೆ ಇಲ್ಲದೇ ಇದ್ದುದ್ದರಿಂದ 1 ನೇ ಆರೋಪಿಗೆ ಸದರಿ ಬೈಕನ್ನು ಚಲಾಯಿಸಲು ಬರದೇ ಸದರಿ ಅಪಘಾತವನ್ನು ಪಡಿಸಿರುತ್ತಾನೆ ಎಂದರೆ ಸರಿ. ಸದರಿ ಟಿಪ್ಪರ್ ಲಾರಿ ನಂ.ಕೆಎ–16–ಎ–2878 ನೇ ಲಾರಿ ಯಾರ ಹೆಸರಿನಲ್ಲಿ ಇರುತ್ತದೆ ಎಂದುನನ ಗೊತ್ತಿಲ್ಲ. ಸದರಿ ಟಿಪ್ಪರ್ ಲಾರಿ ನಂ.ಕೆಎ–16–ಎ–2878 ಲಾರಿಯ ಚಾಲಕನ ಯಾರು ಎಂಬುದು ನನಗೆ ಗೊತ್ತಿಲ್ಲ.

ಸದರಿಅ ಪಘಾತ 1 ನೇ ಆರೋಪಿಯ ತಪ್ಪಿನಿಂದಲೇ ಆಗಿದ್ದರೂ ಸಹಾ ಅಪಘಾತದ ಪರಿಹಾರ ಪಡೆಯವ ಸಲುವಾಗಿ 2 ನೇ ಆರೊಪಾಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

Dt.07.10.2024

ನಿಪಿ–7 ಮತ್ತು 8 ಪೋಟೋದಲ್ಲಿರುವ ಟಿಪ್ಪರ್ ಲಾರಿಯ ಪೋಟೋವನ್ನು ಚಿಕ್ಕಜಾಜೂರು ಪೊಲೀಸ್ ಠಾಣೆಗೆಯಲ್ಲಿ ತೆಗೆದಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆ :ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ.